5. ಮಂತ್ರಿಗಳಿಂದ ಹೇಳಿಕೆ.

ವಿಷಯ: ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕ-2000 ಈ ಬಿಲ್ಲಿನ ಬಗ್ಗೆ ಮಾನ್ಯಮಂತ್ರಿಗಳ ಸ್ಪಷ್ಟೀಕರಣ.

+ಶ್ರೀ ಡಿ.ಕೆ.ಶಿವಕುಮಾರ್(ಸಹಕಾರ ಸಚಿವರು): ಮಾನ್ಯ ಅಧ್ಯಕ್ಷರೇ, ನೆನ್ನೆ ನಾವೇನು ಈ ಸಹಕಾರಿ ಕಾಯಿದೆಗೆ ತಿದ್ದುಪಡಿ ತಂದಿದ್ದೇವೆ ಅದು ಈ ಸದನದಲ್ಲಿ ಅಂಗೀಕಾರ ಆಗಿದೆ. ಕೆಲವು ಪತ್ರಿಕೆಗಳಲ್ಲಿ ನಾಮಿನೇಟ್ ಮಾಡಿದಂಥ ಸದಸ್ಯರಿಗೆ ಮತದಾನದ ಹಕ್ಕಿಲ್ಲವೆಂದು ಬಹುತೇಕವಾಗಿ ವರದಿಯಾಗಿದೆ. ನಾನು ತಮ್ಮ ಮುಖಾಂತರ ಎಲ್ಲಾ ಮಾನ್ಯ ಸದಸ್ಯರಿಗೆ ಮತ್ತು ರಾಜ್ಯದ ಜನರಿಗೆ ತಿಳಿಸಬಯಸುವುದು ಇಷ್ಟೆ. ಸೆಕ್ಷನ್ 29ರಲ್ಲಿ ಯಾವ ನಾಮಿನೇಷನ್ ಮಾಡುತ್ತೇವೆ, ಆ ಮೂರು ಜನಕ್ಕೆ, ಆ ಎಲ್ಲರಿಗೂ ಮತ ಹಾಕುವಂಥ ಹಕ್ಕು ಇದೆ. ಸೆಕ್ಷನ್ 53ರಲ್ಲಿ ನಾಮಿನೇಷನ್ ಮಾಡುವಂಥ ಸದಸ್ಯರಿಗೆ ಮಾತ್ರ ಮತದಾನದ ಹಕ್ಕು ಇರುವುದಿಲ್ಲ. ಸೆಕ್ಷನ್ 29ರಲ್ಲಿ ನಾವೇನು ಮಾಡುತ್ತೇವೆ, ವಿ.ಎಸ್.ಎಸ್.ಎಂ.ಗೆ ಮತ್ತು ಟಿ.ಎ.ಪಿ.ಸಿ.ಎಂ.ಸಿ.ಗೆ ಹಾಗೂ ರಾಜ್ಯದ ಎಲ್ಲಾ ಸೊಸೈಟಿಗಳಿಗೆ, ಅದರಲ್ಲಿ ನಾಮಿನೇಟ್ ಮಾಡುವಂಥ ಮೂವರು ಸದಸ್ಯರುಗಳಿಗೆ ಮತದಾನದ ಹಕ್ಕು, ಚುನಾವಣೆಯಲ್ಲಿ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಇರಬಹುದು ಮತ್ತು ಯಾವುದಕ್ಕೂ ಕೂಡ ಅವರಿಗೆ ಮತ ಹಾಕಲಿಕ್ಕೆ ಅವಕಾಶ ಕೊಡಲಾಗಿದೆ. ಸೆಕ್ಷನ್ 53ರಲ್ಲಿ ಮಾತ್ರ ಅಧ್ಯಕ್ಷ, ಉಪಾಧ್ಯಕ್ಷರಿಗೆ ಇಲ್ಲ. ಬೇರೆ ವಿಚಾರಕ್ಕೆ ಅವರಿಗೆ ಅವಕಾಶ ಇದೆ.

ಶ್ರೀ ಜಗದೀಶ ಶೆಟ್ಟರ್: ಸನ್ಮಾನ್ಯ ಅಧ್ಯಕ್ಷರೇ, ವಿಧಾನ ಸಭೆಯಲ್ಲಿ ನಾವು ಸಾಕಷ್ಟು ವಿನಂತಿ ಮಾಡಿಕೊಂಡಿದ್ದೇವೆ. ಅದು ಯಾವುದನ್ನೂ ಇಲ್ಲಿ ಒಪ್ಪಿಕೊಳ್ಳಲಿಲ್ಲ. ಪರಿಸ್ಥಿತಿ ಹೇಗೆ ಬಂದಿದೆ ಎಂದರೆ, ವಿಧಾನ ಸಭೆಗೆ ಜನರಿಂದ ಆರಿಸಿ ಬಂದ ಸದಸ್ಯರು, ಶಾಸಕರು ನಾವು. ಇಲ್ಲಿ ನಾವು ಇದರ ಬಗ್ಗೆ ಸಾಕಷ್ಟು ಹೇಳಿದ್ದೇವೆ. ಆದರೆ, ಮಂತ್ರಿಗಳು ನಮ್ಮ ಮಾತು ಕೇಳಲಿಲ್ಲ. ವಿಧಾನ ಪರಿಷತ್ತಿಗೆ ಈ ಮಸೂದೆ ಹೋಗಿ, ಅಲ್ಲಿ ಸಾಕಷ್ಟು ತಿದ್ದುಪಡಿಗಳನ್ನು ಮಾಡಿಸಿ, ಅವರಿಗೆ ಅಲ್ಲಿ ಬೆಂಡ್ ಆದರು. ಈ ಪದ್ಧತಿ ಸರಿಯಲ್ಲ. ಅದಕ್ಕೆ, ಈ ಸದನಕ್ಕೂ ಏನಾದರೊಂದು ಮಹತ್ವ ಕೊಡುವಂತಾದ್ದು ಮಾಡಬೇಕು. ಸರ್ಕಾರವಾಗಲೀ, ಇನ್ನಿತರ ಸಚಿವರಾಗಲೀ, ಮುಖ್ಯಮಂತ್ರಿಯಾಗಲೀ, ಯಾರಾದರೂ ಇದರ ಬಗ್ಗೆ ಸ್ವಲ್ಪ ಗಂಭೀರವಾಗಿ ಚಿಂತನೆಯಾಗಬೇಕು. ಇಲ್ಲಿ ಇದರ ಬಗ್ಗೆ ಸಾಕಷ್ಟು ಚರ್ಚೆಯಾಯಿತು. ನಾವು ಮಾಡಿದ್ದೇವೆ, ಮಾನ್ಯ ಸಿಂಧ್ಯರವರು ಮಾಡಿದ್ದಾರೆ, ಹೀಗೆ ಎಲ್ಲರೂ ಮಾಡಿದ್ದಾರೆ. ಆದರೆ, ನಮ್ಮ ಯಾವುದೇ ವಿನಂತಿಗೆ ಅವರು ಮಾನ್ಯತೆ ಮಾಡಲಿಲ್ಲ. ಅಲ್ಲಿ ಹೋಗಿ ಬೆಂಡ್ ಆದರು. ವಿಧಾನ ಪರಿಷತ್ತಿನ ಸದಸ್ಯರಿಗೆ ಹೆಚ್ಚಿನ ಗೌರವ ಇದೆಯೋ, ಮಾನ್ಯತೆ ಇದೆಯೋ, ಅಲ್ಲಿ ಏಕೆ ಇದು ಮಾಡುತ್ತಿದ್ದಾರೆಯೋ ಗೊತ್ತಾಗುತ್ತಿಲ್ಲ. ಈ ಪರಂಪರೆ, ಇದು ಒಳ್ಳೆಯದಲ್ಲ. ಅದಕ್ಕಾಗಿ ಮುಂದೆ

ಇದಾಗಬಾರದು ಎಂಬುದು ನಮ್ಮ ವಿನಂತಿ.

ಶ್ರೀ ಕೆ.ಜಯಪ್ರಕಾಶ ಹೆಗಡೆ: ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದುದನ್ನು ನಾನು ಮುಂದುವರಿಸುತ್ತಾ ಪ್ರಾಯಶಃ ನಮ್ಮ ಪದ್ಧತಿಯನ್ನೇ ಬದಲಾವಣೆ ಮಾಡಿಕೊಳ್ಳೋಣ. ಮೇಲ್ಮನೆಯಲ್ಲಿ ಬಿಲ್ ಇಂಟ್ರಡ್ಯೂಸ್ ಮಾಡಿ, ಅಲ್ಲಿ ಪಾಸಾದ ಮೇಲೆ ಇಲ್ಲಿಗೆ ತಂದರೆ ಹೆಚ್ಚಿನ ಸಮಯ ಉಳಿಯುತ್ತದೆಂದು ನನ್ನ ಅಭಿಪ್ರಾಯ. ಏಕೆಂದರೆ, ಇಲ್ಲಿ ಚರ್ಚೆಯೇ ಆಗುವುದಿಲ್ಲವೆಂದು ಆಯಿತು. ಆದರೆ, ಅಲ್ಲಿ ಈಗ ಎರಡು ಬಿಲ್ ಪಾಸ್ ಆಯಿತು. ಇಲ್ಲಿ ತಿದ್ದುಪಡಿ ಮಾಡುವುದಕ್ಕೆ ಆಗುವುದಿಲ್ಲವೆಂದು ಹೇಳಿದ್ದು ಅಲ್ಲಿ ತಿದ್ದುಪಡಿಯಾಗುತ್ತದೆ. ಹಾಗಾದರೆ, ಅಲ್ಲಿ ಇಂಟ್ರಡ್ಯೂಸ್ ಮಾಡಿ, ಅಲ್ಲಿ ಪಾಸಾದ ಮೇಲೆ, ಇಲ್ಲಿ ತಂದರೆ ಹೆಚ್ಚು ಸಮಯ ಉಳಿಯುತ್ತದೆಂದು ನನ್ನ ಅಭಿಪ್ರಾಯ.

ಶ್ರೀ ಕೆ.ಶ್ರೀನಿವಾಸಗೌಡ: ಮಾನ್ಯ ಅಧ್ಯಕ್ಷರೇ, ಈ ಸಹಕಾರ ಕ್ಷೇತ್ರ ಹೇಗಿದೆಯೆಂದರೆ, ಒಂದು ಫುಟ್‌ಬಾಲ್ ಫೀಲ್ಡ್ ಇದ್ದ ಹಾಗೆ. ನಾನು ಆ ಪಾರ್ಟಿ, ಈ ಪಾರ್ಟಿ ಎಂದು ಹೇಳುವುದಿಲ್ಲ. ಎಲ್ಲಾ ಪಾರ್ಟಿಯವರು ಸೇರಿಕೊಂಡು, ಯಾರು ಮಂತ್ರಿಗಳಾಗುತ್ತಾರೋ ಅವರಿಗೆ ಹೇಗೆ ಬೇಕೋ ಹಾಗೆ ಆ ಫುಟ್‌ಬಾಲನ್ನು ಹೊಡೆಯುತ್ತಾರೆ. ಇದು ವ್ಯವಸ್ಥೆ ಇರುವಂಥಾದ್ದು. ಮಾನ್ಯ ಖರ್ಗೆಯವರು ಕೂಡ ಇಲ್ಲಿ ಸಹಕಾರಿ ಮಂತ್ರಿಗಳಾಗಿದ್ದರು; ನಾನು ಆ ದಿನ ಇರಲಿಲ್ಲ, ಆಬ್ಸೆಂಟ್ ಆಗಿದ್ದೆ. ಈ ಮನೆಯಲ್ಲಿ ಇಷ್ಟೆಲ್ಲಾ ಬೇಡಿ ಮಾಡಿದರೂ ಕೂಡ ಆಗಲಿಲ್ಲ. ಮೂರು ಜನರಿಗೆ ಕೊಡಿ, ಚೆನ್ನಾಗಿರುತ್ತದೆಂದು ನಾನೂ ಹೇಳಿದೆ. ಹಿಂದೆ ಎಸ್.ಎಸ್.ಪಾಟೀಲರೂ ನೂರಕ್ಕೆ ನೂರು ಸರಿ ಮಾಡಿದ್ದಾರೆಂದು ನಾನು ಹೇಳುವುದಿಲ್ಲ. ಅಲ್ಲಿಯೂ ತಪ್ಪುಗಳು ಇತ್ತು. ನೀವು ಆ ರೀತಿ ಮಾಡಬೇಡಿ ಎಂದು ಹೇಳಿದೆ. ಆದು ಆಗುವುದಿಲ್ಲ, ನಾನೇನು ಸನ್ಯಾಸಿಯೇ ಎಂದು ಹೇಳಿದರು. ಇವತ್ತು ಅಲ್ಲಿ ನಿಮಗೆ ಸಂಖ್ಯಾಬಲ ಇಲ್ಲವೆಂದು, ಎಲ್ಲಾ ತಿದ್ದುಪಡಿಗಳನ್ನು ಒಪ್ಪಿಕೊಂಡು ಮತ್ತೆ ಇಲ್ಲಿ ತಂದಿದ್ದೀರಿ. ನೇರವಾಗಿ ಚುನಾಯಿತರಾಗಿ ಬಂದು ಸದಸ್ಯರಾಗಿರುವ ಈ ಮನೆಗೆ ಅಗೌರವ ತಂದಿದ್ದೀರಿ. ನಿನ್ನೆ ಪಂಚಾಯ್ತಿ ಬಿಲ್ಲಿನಲ್ಲೂ ಹಾಗೆಯೇ ಮಾಡಿದಿರಿ. ಇವತ್ತು ಸಹಕಾರಿ ಬಿಲ್ಲಿನಲ್ಲೂ ಅದೇ ರೀತಿ ಮಾಡಿದಿರಿ. ದಯವಿಟ್ಟು ನೀವೇನಾದರೂ ಮಾಡುವ ಹಾಗಿದ್ದರೆ, ಈ ಮನೆಯಲ್ಲೇ ತೀರ್ಮಾನ ತೆಗೆದುಕೊಳ್ಳಬೇಕು. ಆ ಮನೆಯಲ್ಲಿ ಸಂಖ್ಯಾಬಲ ಇಲ್ಲವೆಂದು ನೀವು ತೀರ್ಮಾನ ತೆಗೆದುಕೊಳ್ಳಬಾರದು ಎಂದು ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೇ, ಮಾನ್ಯ ಸಹಕಾರ ಸಚಿವರು ಆ ದಿವಸ.....

ಅಧ್ಯಕ್ಷರು: ನಿನ್ನೆ ತಮಗೆಲ್ಲಾ ಇಲ್ಲಿ ಅವಕಾಶ ಇತ್ತು. ಆಗ 'ಕರಾಳ ಶಾಸನ' ಎಂದು

ಹೇಳಿ ನೀವು ಹೊರಟು ಹೋದಿರಿ; ಈಗ ಮಾತನಾಡುತ್ತಿದ್ದೀರಿ.

ಶ್ರೀ ಎಸ್.ಎಸ್.ಪಾಟೀಲ್: ಸನ್ಮಾನ್ಯ ಅಧ್ಯಕ್ಷರೇ, ನಾನು ಅದನ್ನೇ ಹೆಳುವುದಕ್ಕೆ ಹೊರಟಿದ್ದೀನಿ.

ಶ್ರೀ ಡಿ.ಕೆ.ಶಿವಕುಮಾರ್: ನಿನ್ನೆ ಈ ತಿದ್ದುಪಡಿ ಬಂದಾಗ ತಾವು ಯಾರೂ ಇರಲಿಲ್ಲ. ಮಾನ್ಯ ಎಸ್.ಎಸ್.ಪಾಟೀಲರೂ ಕೂಡ, ಇದಕ್ಕೆ ಸಭಾತ್ಯಾಗ ಮಾಡುತ್ತೇವೆಂದು ಹೇಳಿ, ಹೊರಟು ಹೋದರು. ಈಗ ಮತ್ತೆ ಮಾತನಾಡುವಂಥಾದ್ದು ಏನಿದೆ?

ಶ್ರೀ ಎಸ್.ಎಸ್.ಪಾಟೀಲ್: ಈಗ ನಿಮ್ಮನ್ನು ಸ್ವಾಗತ ಮಾಡುವುದಕ್ಕೆ ನಿಂತಿದ್ದೇನೆ. ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದರು. ಅವರು ನಿನ್ನೆ ಇರಲಿಲ್ಲ, ಬಹುಮತದ ಗರ ಅವರಿಗೆ ಹೊಡೆದಿದೆ. ಅದನ್ನು ನುಡಿಸುವುದಕ್ಕೆ ಆಗುವುದಿಲ್ಲ. ಆ ಕಾರಣದಿಂದ ಅದು ಆಗಲಿಲ್ಲ, ಆ ಮಾತು ಇರಲಿ. ಅಲ್ಲೇನಾಗಿದೆ ಎಂದರೆ, ಈಗಲೂ ತಮಗೆ ವಿನಂತಿ ಮಾಡಿಕೊಳ್ಳುತ್ತೇನೆ. ಮಾನ್ಯ ಕೆ.ಹೆಚ್.ಪಾಟೀಲರ ಕಡೆಯಿಂದ ಆಗಲಿಲ್ಲ. ಮಾನ್ಯ ಖರ್ಗೆಯವರ ಕಡೆಯಿಂದ ಆಗಲಿಲ್ಲ. ಮಾನ್ಯ ರಂಗನಾಥರವರ ಕಡೆಯಿಂದ ಆಗಲಿಲ್ಲ, ನನ್ನ ಕಡೆಯಿಂದ ಆಗಲಿಲ್ಲ. ಅಂಥಾದ್ದು ಒಬ್ಬ ಯುವಕ ಮಂತ್ರಿಯಾಗಿ ಮಾಡಿದ್ದು ಎಂಬುದು ಇತಿಹಾಸದಲ್ಲಿ ಉಳಿಯುತ್ತದೆ. ದಯವಿಟ್ಟು ಎಲ್ಲವನ್ನೂ ತಿದ್ದುಪಡಿ ಮಾಡಿಬಿಡಿ. ನೀವು ಮುಂದೆ ಎಲ್ಲವನ್ನೂ ಮಾಡುತ್ತೀರಿ. ಏಕೆಂದರೆ ನಿನ್ನೆ ಒಂದು ಆಗಿದೆ. ನಿನ್ನೆ ಮಾರ್ಕೆಟಿಂಗ್ ಮಿನಿಸ್ಟರು ಇರಲಿಲ್ಲ. ಎನ್.ಡಿ.ಡಿ.ಬಿ.ಯವರು ಸಾಲ ಕೊಡುತ್ತೇವೆಂದು ಬಂದರೆ, ಅದರ ಹಿಂದೆ ಸಚಿವ ಸಂಪುಟದಲ್ಲಿ ನಿರ್ಣಯ ಮಾಡಿದ್ದಾರೆ. ಏನೆಂದರೆ, ನಾಮಿನೇಷನ್ ತೆಗೆದರೆ ಮಾತ್ರ ಸಾಲ ಕೊಡುತ್ತಾರೆ, ಆಮೇಲೆ ಅವರು ನಿಲ್ಲಿಸುತ್ತಾರೆ. ಇದನ್ನು ಅವರು ಸಚಿವಸಂಪುಟದಲ್ಲಿ ಒಪ್ಪಿಕೊಂಡಿದ್ದಾರೆ. ಅದಕ್ಕಾಗಿ ಇವತ್ತೇ ನೀವು ಮಾಡಿಬಿಟ್ಟರೆ, ನಾಳೆ ನಬಾರ್ಡ್‌ನವರು ನಿಲ್ಲಿಸಿಬಿಟ್ಟರೂ, ನೀವು ಸುಮ್ಮನೆ 'ಹೌದು' ಎಂದುಬಿಡುತ್ತೀರಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಎನ್ ಡಿ ಡಿ ಬಿ ಯ ಕಂಡೀಷನ್ ನಾಮಿನೇಷನ್ ತೆಗೆಯತಕ್ಕಂಥಾದ್ದು ಅಲ್ಲ. ಅವರು ಪರ್ಮಿಷನ್ ಕೇಳಿದ್ದಾರೆ. ಮಾರ್ಕೆಟ್‌ನಲ್ಲಿ ಅವರಿಗೆ ಎ.ಪಿ.ಎಂ.ಸಿ ಆಕ್ಟ್ ವ್ಯಾಪ್ತಿಯಿಂದ ವಿನಾಯಿತಿ ಮಾಡಬೇಕೆಂದು ಮಾತ್ರ ಕೇಳಿಕೊಂಡಿದ್ದಾರೆ. ಅದಕ್ಕೆ ಸೀಮಿತವಾಗಿದೆ ಅಷ್ಟೆ.

ಶ್ರೀ ಎಸ್.ಎಸ್.ಪಾಟೀಲ್: ನಾನು ಪತ್ರಿಕೆಯಲ್ಲಿ ಬಂದಿದ್ದನ್ನು ನೋಡಿ, ಹೇಳುತ್ತಿದ್ದೇನೆ. ಆ ಸಂಸ್ಥೆಗಳಿಗೆ ಸ್ವಾತಂತ್ರ್ಯ ಕೊಡಬೇಕು, ಅದರಲ್ಲಿ ಸರ್ಕಾರದ ಹಸ್ತಕ್ಷೇಪ ಇರಬಾರದು ಎಂದು ಹೇಳಿದ್ದಾರೆ. ಆ ಕಂಡೀಷನ್ ಹಾಕಿದ್ದಾರೆ, ಅದಕ್ಕೆ ನೀವು ಒಪ್ಪಿಕೊಂಡಿದ್ದೀರಿ. ಅದೇ ರೀತಿ ಇದಕ್ಕೂ ಕೂಡ ಒಪ್ಪಿದರೆ ಇತಿಹಾಸದಲ್ಲಿ ಉಳಿಯುತ್ತೀರಿ. ದಯವಿಟ್ಟು, ಅದನ್ನೂ ಕೂಡ ತಾವು ತಿದ್ದುಪಡಿ ಮಾಡಿದರೆ ತಮಗೆ

ಸ್ವಾಗತ ಮಾಡುತ್ತೇನೆ. ಇಲ್ಲದೇ ಹೋದರೆ, ನಿನ್ನೆ ಹೇಳಿದ ಹಾಗೆ, ಇದು ಕರಾಳ ಶಾಸನ, ಇನ್ನೂ ಉಳಿದಿದೆ.

ಶ್ರೀ ಕೆ.ಶ್ರೀನಿವಾಸಗೌಡ: ಮಾನ್ಯ ಪಾಟೀಲರೇ ನಾಮಿನೇಷನ್ ಮಾಡಿದರು. ನಾವು ಅವರು, ಇವರು ಎಂದು ಹೇಳುವುದಿಲ್ಲ. ಈ ಸಹಕಾರ ವ್ಯವಸ್ಥೆಯಲ್ಲಿ ಎಲ್ಲರೂ ಹಾಗೆಯೇ ಹೇಳಿದ್ದಾರೆ. ಏಕೆ ಅದನ್ನು ಮಾತನಾಡುತ್ತೀರಿ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಅಧ್ಯಕ್ಷರೇ, ಈ ಸಹಕಾರಿ ಕಾನೂನಿನ ಬಗ್ಗೆ ಮಾತನಾಡತಕ್ಕ ಸಂದರ್ಭದಲ್ಲಿ ನಾನು ಅತ್ಯಂತ ಕಳವಳಕಾರಿಯಾದ ವಿಚಾರವನ್ನು ಪ್ರಸ್ತಾಪ ಮಾಡಿದ್ದೆ. ಯಾವುದಾದರೂ ಬಿಲ್ ಬಂದಂಥ ಸಂದರ್ಭದಲ್ಲಿ ಆಗ ಮತ್ತೊಮ್ಮೆ ಮಾತನಾಡುತ್ತೇನೆ. ಆದರೆ, ನಿನ್ನೆಯ ಕಾರ್ಯಕ್ರಮ ಪಟ್ಟಿಯಲ್ಲಿ ಇದು ಇರಲಿಲ್ಲ. ನಾವೆಲ್ಲರೂ ಸಹಿತ ಉದ್ದೇಶಪೂರ್ವಕವಾಗಿಯೇ ಹೊರಗಡೆ ಹೋಗಿದ್ದೆವು. ಇದು ಎರಡನೇ ಸಾರಿ ಆಗುತ್ತಾ ಇರತಕ್ಕಂಥಾದ್ದು.

ಅಧ್ಯಕ್ಷರು: ನಾವು ನಿಮಗೆ ಸಪ್ಲಿಮೆಂಟರಿ ಅಜೆಂಡಾ ಆಮೇಲೆ ಕೊಟ್ಟೆವಲ್ಲ!

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಅಧ್ಯಕ್ಷರೆ, ತಮಗೆ ಅಧಿಕಾರ ಇದೆ, ಸಂಪೂರ್ಣವಾಗಿ ಕಾರ್ಯಕ್ರಮಗಳ ಪಟ್ಟಿನ್ನು ಬದಲಾವಣೆ ಮಾಡತಕ್ಕ ಅಧಿಕಾರ ತಮಗೆ ಇದೆ. ಇದನ್ನು ನಾವು ಒಪ್ಪುತ್ತೇವೆ. ಖಾಸಗಿಯಾಗಿ ನಮ್ಮಿಬ್ಬರನ್ನು ಕರೆಸಿ ಹೇಳಿದ್ದೀರಿ. ಇವತ್ತು ಮಾನ್ಯಮಂತ್ರಿಗಳು ಬಂದು ಹೇಳುತ್ತಾ ಇದ್ದಾರೆ, ಅದಕ್ಕೋಸ್ಕರ ಸಂಜೆ ಮಾಡೋಣ ಎಂಬ ಮಾತನ್ನು ತಾವು ಹೇಳಿದ್ದೀರಿ. ಅದನ್ನು ನಾನು ಆಲ್ಲಗಳೆಯುತ್ತಾ ಇಲ್ಲ. ಆದರೆ, ಎರಡು ವಿಚಾರಗಳ ಬಗ್ಗೆ ನನ್ನದು ತಕರಾರು ಇದೆ. ಒಂದನೇ ತಕರಾರು ಏನೆಂದರೆ, ನಾವು ಮಾತನಾಡತಕ್ಕಂಥಾದ್ದು ಎಲ್ಲಾ ನಿಮಗೆ ಬೇಕಾಗಿಲ್ಲ. ನಮಗೆ ಮೆಜಾರಿಟಿ ಇಲ್ಲ. 60-70 ಜನ ಇದ್ದಾರೆ. ನಾವು 150 ಜನ ಇದ್ದೇವೆ. ಇವರನ್ನು ಏಕೆ ಲೆಕ್ಕಕ್ಕೆ ಇಟ್ಟುಕೊಳ್ಳಬೇಕೆಂಬುದೇ ಸರ್ಕಾರದ ಧೋರಣೆಯಾದಲ್ಲಿ ದಯಮಾಡಿ ಇನ್ನು ಮೇಲೆ ಎಲ್ಲಾ ಮಸೂದೆಗಳನ್ನು ಸಹಿತ ವಿಧಾನ ಪರಿಷತ್ತಿನಲ್ಲಿ ಪಾಸ್ ಮಾಡಿಕೊಳ್ಳಿ. ಅದಾದ ನಂತರ ಇಲ್ಲಿ ಮಂಡನೆ ಮಾಡಿ, ನಾವು ನಾಮಕಾವಸ್ಥೆ ನಮಗೆ ಮೆಜಾರಿಟಿ ಇಲ್ಲವೆಂದು ನಾವು ಹೇಳುತ್ತೇವೆ. ಇದಲ್ಲದೆ ಹೋದರೆ ನಾವು ಹೇಳತಕ್ಕಂಥಾ ವಿಚಾರಗಳನ್ನು ಸಹ ಪರಿಶೀಲನೆ ಮಾಡತಕ್ಕಂಥಾ ಕನಿಷ್ಟ ಸೌಜನ್ಯವನ್ನು ತೋರಿಸಬೇಕೆನ್ನತಕ್ಕಂಥಾದ್ದು ನನ್ನ ಅಭಿಪ್ರಾಯ ಮೊದಲನೆಯದು. ಎರಡನೆಯದಾಗಿ ಈ ಒಂದು ಮಸೂದೆಯನ್ನು ನಿನ್ನೆ ರಾತ್ರಿ 12 ಗಂಟೆ ಒಳಗಡೆ ಈ ಮನೆ ಒಪ್ಪದೇ ಹೋಗಿದ್ದರೆ ಆಕಾಶ ಏನೂ ಕಳಚಿ ಬೀಳುತ್ತಿರಲಿಲ್ಲ. ತಪ್ಪು ತಿಳಿವಳಿಕೆಯನ್ನು ಏಕೆ ಕೊಡಬೇಕು? ನಾವೆಲ್ಲ ಚರ್ಚೆ ಮಾಡಿ ನಿಧಾನವಾಗಿ ಮಾಡಿದ್ದರೆ ಎಷ್ಟೊಂದು ಉಪಯೋಗವಾಗುತ್ತದೆ. ಈಗ ನೋಡಿ, ಒಂದು ಹೊಸ ವಿಷಯವನ್ನು ಮಾನ್ಯ ಎಸ್.ಎಸ್.ಪಾಟೀಲರು ಎತ್ತಿದರು. ಇದೇ ಸಚಿವ ಸಂಪುಟ ತೀರ್ಮಾನ

ತೆಗೆದುಕೊಂಡಿದೆ. ಎನ್.ಡಿ.ಡಿ.ಬಿ.ಯವರು ದುಡ್ಡನ್ನು ಕೊಡಬೇಕಾದರೆ ನಾಮಿನೇಟೆಡ್ ಮೆಂಬರ್ಸ್ ಓಟಿಂಗ್ ಪವರ್ಸ್ ಕೊಡಬಾರದು ಅಂತ ಹೇಳುತ್ತಾರೆ. ಈ ರೀತಿ ಅನೇಕ ಅಂಶಗಳು ಇರುತ್ತವೆ. ಇವೆಲ್ಲ ನಾವು ಮಾತನಾಡಬೇಕೆಂದು ಇದ್ದರೆ, ಸರ್ಕಾರ ನಮಗೆ ಸ್ಪಂದಿಸುತ್ತದೆ ಅಂತ ನಾವು ಇದ್ದರೆ ತಮ್ಮಂತಹ ಮಹನೀಯರು ಇರುವಾಗ ಸಚಿವ ಸಂಪುಟದಲ್ಲಿ ಚರ್ಚೆ ಮಾಡಿ ನಮ್ಮ ಭಾವನೆಗಳಿಗೂ ಸ್ಪಂದಿಸುವುದು ಒಳ್ಳೆಯದು ಎಂದು ಈ ಸರ್ಕಾರಕ್ಕೆ ನನ್ನ ಕಿವಿ ಮಾತು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೇ, ಈ ಸದನಕ್ಕೆ ಅಗೌರವ ಮಾಡಬೇಕು ಅಥವಾ ಇಲ್ಲಿರತಕ್ಕಂಥ ಮಾನ್ಯ ಸದಸ್ಯರ ಸಲಹೆಗಳನ್ನು ತೆಗೆದುಕೊಳ್ಳಬಾರದು ಎನ್ನತಕ್ಕಂಥಾದ್ದು ಸರ್ಕಾರದ ಉದ್ದೇಶವಲ್ಲ. ಈ ಮನೆ ಅತ್ಯಂತ ಮಹತ್ವದ್ದು ಮತ್ತು ಸಾವರಿನ್. ಈ ಮನೆಗೆ ಇರತಕ್ಕಂಥ ಅಧಿಕಾರ ಬಹುಶಃ ಯಾವ ಮನೆಗೂ ಇಲ್ಲ. ನಾನು ಈ ಮಾತು ಹೇಳಿದರೆ ತಪ್ಪಾಗಲಿಕ್ಕೆ ಇಲ್ಲ, This House is the creator of many institutions. ಅದಕ್ಕೆ ತಾವ್ಯಾರು ಕೂಡ ತಪ್ಪು ಭಾವನೆ ಹೊಂದಬೇಕಾಗಿಲ್ಲ. ಅನೇಕ ಸಾರಿ ಏನಾಗುತ್ತದೆ ಅಂದರೆ ನಮ್ಮ ನಿಲುವಿಗೆ ಸ್ಟಿಕಾನ್ ಆಗಿರುತ್ತೇವೆ. ಆದರೆ ಕೆಲವು ಸಲ ಅದಕ್ಕೆ ಸಹಕಾರ ಸಿಗದೆ ಇದ್ದಾಗ ಆ ಅರ್ಡಿನೆನ್ಸ್‌ನ್ನು ಕಾನೂನು ರೂಪದಲ್ಲಿಯೇ ಇಟ್ಟುಕೊಳ್ಳಬೇಕು ಎನ್ನತಕ್ಕಂಥಾ ಒತ್ತಾಯ ಬಂದಾಗ ಇನ್‌ಎವಿಟೆಬಲಿ ಅದು ಆಗಿದೆಯೇ ಹೊರತಾಗಿ ಮತ್ತೊಂದು ಯಾವುದೇ ದೃಷ್ಟಿಯಿಂದ ಅಲ್ಲ.....

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಮಾನ್ಯ ಅಧ್ಯಕ್ಷರೇ ಒಂದು ನಿಮಿಷ. ಇಲ್ಲಿರತಕ್ಕಂಥ ಯಾವುದೇ ಸದಸ್ಯರು ಸಹ ಗ್ರಾಮೀಣ ಪ್ರದೇಶಗಳಲ್ಲಿ ಶೌಚಾಲಯಗಳನ್ನು ಕಟ್ಟಬಾರದು ಎನ್ನತಕ್ಕಂಥ ಯಾರದೂ ಅಭಿಪ್ರಾಯ ಇಲ್ಲ. ನಾವು ತಮ್ಮನ್ನು ಪರಿಪರಿಯಾಗಿ ಬೇಡಿಕೊಂಡೆವು. ಇದರಿಂದ ಒಳ್ಳೆಯದಾಗುತ್ತದೆ, ಸ್ವಚ್ಛ ಗ್ರಾಮಗಳನ್ನಾಗಿ ಮಾಡುವುದಕ್ಕೆ ಅನುಕೂಲವಾಗುತ್ತದೆ ಇದೊಂದನ್ನು ಒಪ್ಪಿಕೊಳ್ಳಿ ಅಂತ ನಾವು ಹೇಳಿದೆವು. ಆದರೆ ತಾವು ಒಪ್ಪಲಿಲ್ಲ. ಸಹಕಾರ ಮಸೂದೆ ಬಗ್ಗೆ ನಾವು ಒಪ್ಪಿಕೊಳ್ಳುತ್ತೇವೆ, ನಮಗೂ ನಿಮಗೂ ಅಜಗಜಾಂತರ ವ್ಯತ್ಯಾಸ ಇದೆ. ಶೌಚಾಲಯಗಳ ಬಗ್ಗೆ ಏಕೆ ನೀವು ಒಪ್ಪಲಿಲ್ಲ? ಇದರಿಂದ ಏನಾಗುತ್ತದೆ ಅಂದರೆ What is the signal that you are going to give? Yes, this House is a creator of many other bodies. We agree. ಆದರೆ ನಮಗೆ ಏನು ಗೌರವ ಸಿಕ್ಕಿದಂತೆ ಆಗುತ್ತದೆ? ತಾವು ಆ ಸ್ಥಾನದಲ್ಲಿ ಕುಳಿತಿರುವಾಗ ಈ ರೀತಿ ಆದರೆ ಇನ್ನು ಬೇರೆ ಹೇಗೆ ಎನ್ನುವುದನ್ನು ಯೋಚನೆ ಮಾಡಬೇಕಾಗುತ್ತದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೇ, ಆ ದೃಷ್ಟಿಯಿಂದ ಮಾತ್ರ ಅಂದರೆ ಒಂದು ಆರ್ಡಿನೆನ್ಸ್ ಕಾನೂನು ರೂಪದಲ್ಲಿ ಜಾರಿಯಲ್ಲಿ ಇರಲಿ ಎನ್ನತಕ್ಕಂಥ

ದೃಷ್ಟಿಯಿಂದ ಮಾತ್ರ ಕೆಲವು ಸಲಹೆಗಳನ್ನು ಒಪ್ಪಿಕೊಂಡು ತಂದಿದ್ದಾರೆಯೇ ಹೊರತಾಗಿ ನಮ್ಮ ಗುರಿ ಏನಿತ್ತು ಅದು ತಮಗೆ ಗೊತ್ತಿದೆ. ಅದು ರಾಜಕೀಯವಾಗಿ ಇರಬಹುದು ಏನೇ ಇರಬಹುದು, naturally we wanted to give all concerned members voting rights, ಅವರು ಬರಬೇಕು ಎನ್ನತಕ್ಕಂಥಾದ್ದು ಇತ್ತು. ಅದನ್ನು ಈಡೇರಿಸಲು ಆಗಲಿಲ್ಲ. ಇನ್‌ಎವಿಟಬಿಲಿ ಬಂತು, ಪುನಃ ಚರ್ಚೆಗೆ ಇಲ್ಲಿಗೆ ಬಂದಾಗ ತಾವು ಎತ್ತಬಹುದಾಗಿತ್ತು. ಸಮಯ ಜಾಸ್ತಿ ಆಗಿದೆ ಅಂತ ಹೇಳಿ ಅನೇಕ ಸದಸ್ಯರು ತಮಗೆ ಕೇಳಿಕೊಂಡು ಹೋಗಿದ್ದರು. ಆದರೆ ಈ ಸದನಕ್ಕೆ ಅಗೌರವ ತೋರಬೇಕು ಎನ್ನತಕ್ಕಂಥ ದೃಷ್ಟಿ ಸರ್ಕಾರಕ್ಕೆ ಇಲ್ಲ. ತಮ್ಮ ಅಭಿಪ್ರಾಯಗಳನ್ನು ಕೇಳಿಕೊಂಡು ತಮ್ಮ ಸಲಹೆಗಳನ್ನು ಕೇಳಿಕೊಂಡೇ ಸರ್ಕಾರಕ್ಕೆ ಯಾವುದು ಸೂಕ್ತವಾಗಿದೆ ಅದನ್ನು ಒಪ್ಪಬಹುದು. ಸೂಕ್ತವಲ್ಲದ್ದನ್ನು ಸರ್ಕಾರ ತಿರಸ್ಕಾರ ಮಾಡತಕ್ಕಂಥ ಹಕ್ಕು ಸಹ ಇದೆ. ದಯವಿಟ್ಟು ಈ ಒಂದು ಭಾವನೆಯನ್ನು ತಾವ್ಯಾರು ತಾಳಬಾರದು ಅಂತ ಹೇಳುತ್ತೇನೆ.